# ಉಡುಪುಗಳಿಗುಂಟು ವೆಲ್ವೆಟ್ ನಂಟು

**ವೆಲ್ವೆಟ್ ಉಡುಪುಗಳು ನುಣುಪಾಗಿದ್ದು, ಹೊಳೆಹೊಳೆವ ಆಕರ್ಷಕ ಬಣ್ಣಗಳಲ್ಲಿ ಲಭ್ಯ. ಇದರಲ್ಲಿ ಪಾರ್ಟಿವೇರ್, ಡೈಲಿವೇರ್‌ಗಳೂ ಇದ್ದು ಮಹಿಳೆ, ಮಕ್ಕಳ ಮನಸೆಳೆಯುತ್ತಿವೆ. ಆಕರ್ಷಕ ಲುಕ್‌ಗೆ ವೆಲ್ವೆಟ್ ಉಡುಪು ಸಹಕಾರಿಯಾಗಿದೆ.**

**ಆಶಾ ಎಸ್. ಕುಲಕರ್ಣಿ**

ವೆಲ್ವೆಟ್ ಹೆಸರಿನಲ್ಲಿಯೇ ಏನೋ ಒಂದು ಆಕರ್ಷಣೆ. ಇದೊಂದು ಅತ್ಯಂತ ಸೊಗಸಾದ ಉತ್ಕೃಷ್ಟ ಮಟ್ಟದ ಬಟ್ಟೆ ಎಂಬುದರಲ್ಲಿ ಎರಡು ಮಾತಿಲ್ಲ. ಇದರ ನುಣುಪಾದ ಮೇಲ್ಮೈ, ಮೃದುತನ, ಹೊಳಪು, ರಿಚ್ ಲುಕ್ ಎಲ್ಲವೂ ವಿಶಿಷ್ಟವಾಗಿದ್ದು ನೋಡುತ್ತಲೇ ಇರಬೇಕೆಂಬ ಭಾವ ಮೂಡುತ್ತದೆ. ಈ ಬಟ್ಟೆ ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಟ್ಟಿದ್ದೇ ಇದರ ರಾಯಲ್ ಲುಕ್‌ನಿಂದ. ಮೂಲತಃ ಈ ವೆಲ್ವೆಟ್ ಬಟ್ಟೆಗಳು ಕಾಶ್ಮೀರ ಪ್ರದೇಶದಲ್ಲಿ ತಯಾರಾಗುತ್ತವೆ. ಆ ಕಾರಣದಿಂದ ಇವನ್ನು ಕಾಶ್ಮೀರಿ ವ್ಯಾಪಾರಿಗಳು ಪರಿಚಯಿಸಿದರು ಎನ್ನಲಾಗುತ್ತಿದೆ. ಈ ಬಟ್ಟೆಗಳಿಂದ ತಯಾರಾದ ಉಡುಪುಗಳು ಅತ್ಯಂತ ದುಬಾರಿಯಾಗಿರುತ್ತಿದ್ದುದರಿಂದ ಇವನ್ನು ಶ್ರೀಮಂತರ ಬಟ್ಟೆ ಎಂದೇ ಕರೆಯಲಾಗುತ್ತಿತ್ತು.

ಹಿಂದಿನ ಕಾಲದಲ್ಲಿ ಕೆಲ ಶ್ರೀಮಂತರು ಈ ವೆಲ್ವೆಟ್ ಬಟ್ಟೆಗಳ ರಾಯಲ್ ಲುಕ್ ಹಾಗೂ ನುಣುಪುತನಕ್ಕೆ ಮಾರುಹೋಗಿ ಇವುಗಳಿಂದ ಸೂಟ್ ಹೊಲಿಸಿಕೊಂಡು ಧರಿಸುತ್ತಿದ್ದರು. ಆಗ ಬರೀ ರಾಜಮನೆತನದವರು, ಶ್ರೀಮಂತರು ಮಾತ್ರ ಧರಿಸುತ್ತಿದ್ದ ಈ ವೆಲ್ವೆಟ್ ಉಡುಪುಗಳು ಅಂದಿನ ಸಾಮಾನ್ಯ ಜನರಿಗೆ ಸಿಗುವುದೇ ದುಸ್ತರವಾಗಿತ್ತು. ಆದರೆ ಇದೀಗ ಜಮಾನಾ ಬದಲಾಗಿದೆ. ಈ ವೆಲ್ವೆಟ್ ಬಟ್ಟೆಗಳಿಂದ ತಯಾರಾದ ಉಡುಪುಗಳು ಜನಸಾಮಾನ್ಯರಿಗೂ ಕಡಿಮೆ ದರದಲ್ಲಿ ದೊರೆಯುತ್ತಿದೆ ಹಾಗೂ ಯಂಗ್ ಜನರೇಷನ್‌ನ ಹಾಟ್ ಫೇವರೆಟ್ ಲಿಸ್ಟ್‌ನಲ್ಲಿ ಸೇರಿಬಿಟ್ಟಿವೆ.

ಇತ್ತೀಚಿನ ದಿನಗಳಲ್ಲಿ ಚಳಿಯ ವಾತಾವರಣಕ್ಕೆ ಪೂರಕವಾಗಿರುವ ಈ ವೆಲ್ವೆಟ್‌ನ ಬೇಡಿಕೆ ಅತೀ ಹೆಚ್ಚಾಗಿದ್ದು, ಚಳಿಯಿಂದ ಮುಕ್ತಿ ನೀಡಿ ಬೆಚ್ಚಗಿನ ಅನುಭವ ನೀಡುತ್ತಿದೆ. ಇನ್ನು ಈ ವೆಲ್ವೆಟ್ ಬಟ್ಟೆ ಅತ್ಯಂತ ಸಾಮಾನ್ಯ ಉಡುಪುಗಳಿಗೂ ಕೂಡ ರಿಚ್ ಲುಕ್ ನೀಡಲು ಸಮರ್ಥವಾಗಿದೆ. ಇದೀಗ ಫ್ಯಾಷನ್‌ಪ್ರಿಯರಿಗೋಸ್ಕರ ವಸ್ತ್ರವಿನ್ಯಾಸಕಾರರು ವೆಲ್ವೆಟ್ ಬಟ್ಟೆಗಳನ್ನು ಉಡುಪುಗಳ ಅಂದ ಹೆಚ್ಚಿಸಲು ಬಳಸುತ್ತಿದ್ದಾರೆ. ಅಂದರೆ ಸಲ್ವಾರ್‌ಗಳ ಸ್ಲೀವ್ಸ್‌ಗಳಿಗೆ, ಅದರ ನೆಕ್‌ಲೈನ್‌ಗೆ ವೆಲ್ವೆಟ್ ಬಳಸುವುದು, ವೆಲ್ವೆಟ್ ಫ್ರಾಕ್, ವೆಲ್ವೆಟ್ ಸ್ಕರ್ಟ್, ಟಾಪ್‌ಗಳು, ಕೋಟ್, ಜಾಕೆಟ್‌ಗಳು ಮಾರುಕಟ್ಟೆಗೆ ಎಂಟ್ರಿ ಕೊಟ್ಟಿವೆ. ಇವುಗಳನ್ನು ಧರಿಸುವುದರಿಂದ ಚಳಿಯಿಂದ ರಕ್ಷಣೆ ಪಡೆಯಬಹುದು. ಇವುಗಳ ಜೊತೆಗೆ ಸಾಂಪ್ರದಾಯಿಕ ಸಮಾರಂಭಕ್ಕೆ ಧರಿಸುವ ವೆಲ್ವೆಟ್ ಸೀರೆಗಳು ಕೂಡ ಮಾರುಕಟ್ಟೆಗೆ ಎಂಟ್ರಿ ಕೊಟ್ಟಿವೆ. ಈ ಸೀರೆಗಳು ಐಷಾರಾಮಿ ನೋಟಕ್ಕೆ ಹೆಸರುವಾಸಿಯಾಗಿದ್ದು, ಮದುವೆ, ನಿಶ್ಚಿತಾರ್ಥ ಮತ್ತಿತರ ಶುಭ ಸಮಾರಂಭಗಳಿಗೆ ಧರಿಸಲು ಆಕರ್ಷಕವಾಗಿ ಕಾಣುತ್ತವೆ.

